# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಭೂ ಖರೀದಿ ಯೋಜನೆಯಯಲ್ಲಿ ಘಟಕ ವೆಚ್ಚ ರೂ.5.00 ಲಕ್ಷಗಳಿಂದ ರೂ.10.00 ಲಕ್ಷಗಳಿಗೆ ಹೆಚ್ಚಿಸುವ ಬಗ್ಗೆ.

ಓದಲಾಗಿದೆ:- 1) ಸರ್ಕಾರಿ ಆದೇಶ ಸಂಖ್ಯೆ: ಸಕಇ/121/ಬಿಎಂಎಸ್/2010, ದಿ.14.07.2010
2) ಸರ್ಕಾರದ ಆದೇಶ ಸಂಖ್ಯೆ:ಸಕಇ/79/ಎಸ್‌ಡಿಎಸ್/2012, ದಿ.13.06.2012
3) ಸರ್ಕಾರಿ ಆದೇಶ ಸಂಖ್ಯೆ:265 ಬಿಎಂಎಸ್ 2012, ದಿ.20.09.2012
4) ವ್ಯವಸ್ಥಾಪಕ ನಿರ್ದೇಶಕರು, ಡಿ.ಬಿ.ಸಿ.ಡಿ.ಸಿ, ಇವರ ಪ್ರಸ್ತಾವನೆ ಸಂಖ್ಯೆ: ದೇಹಿನಿ:ಅಅಅ:ಭೂಖಯೋ:ಸಿಆರ್-32/14-15, ದಿ.10.06.2014

******

**ಪ್ರಸ್ತಾವನೆ:-**

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಆಧೇಶದಲ್ಲಿ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಭೂ ಖರೀದಿ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚವನ್ನು ನೋಂದಾಯಿತ ಬೆಲೆಯ ಎರಡು ಪಟ್ಟುವರೆಗೆ ಏರಿಸಿ ಘಟಕ ವೆಚ್ಚದ ಗರಿಷ್ಠ ಮಿತಿ 2.50 ಲಕ್ಷ ರೂ.ಗಳನ್ನು ಮೀರದಂತೆ ಖರೀದಿಸಲು ಹಾಗೂ ಈ ನೋಂದಾಯಿತ ಬೆಲೆಗಿಂತ ಹೆಚ್ಚಾಗಿದ್ದಲ್ಲಿ ಅಂತಹ ಪ್ರಕರಣಗಳಿಗೆ ಕಂದಾಯ ಇಲಾಖೆಯ ಅನುಮೋದನೆ ಪಡೆಯಲು ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಆದೇಶದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚದ ಆರ್ಥಿಕ ಮಿತಿಯನ್ನು 3.00 ಲಕ್ಷದಿಂದ ರೂ.5.00 ಲಕ್ಷದವರೆಗೆ ಹೆಚ್ಚಿಸಿ ಆದೇಶಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(3)ರ ಆದೇಶದಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟನ ವೆಚ್ಚದ ಆರ್ಥಿಕ ಮಿತಿಯನ್ನು ರೂ.5.00 ಲಕ್ಷದಿಂದ ರೂ.10.00 ಲಕ್ಷಗಳವರೆಗೆ ಕೆಲವು ಷರತ್ತಿನ ಮೇರೆಗೆ ಹೆಚ್ಚಿಸಿ ಆದೇಶಿಸಿದೆ.

ಅದರಂತೆ ಮೇಲೆ ಓದಲಾದ ಕ್ರಮ ಸಂಖ್ಯೆ(4)ರ ಅಲೆಮಾರಿ/ ಅರೆ ಅಲೆಮಾರಿ ಜನಾಂಗದ ಭೂ ಖರೀದಿ ಯೋಜನೆಯ ಅಲೆಮಾರಿ/ಅರೆ ಅಲೆಮಾರಿ ಜನಾಂಗದವರಿಗೂ ನಿಗಧಿಪಡಿಸುವಂತೆ, ಅಂದರೆ, ರೂ.5.00 ಲಕ್ಷಗಳಿಂದ ರೂ.10.00 ಲಕ್ಷಗಳಿಗೆ ಹೆಚ್ಚಿಸಲು ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಸಕಇ 378 ಬಿಎಂಎಸ್ 2014, ಬೆಂಗಳೂರು**
**ದಿನಾಂಕ:05-09-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಅಲೆಮಾರಿ/ಅರೆ ಅಲೆಮಾರಿ ಜನಾಂಗಗಳ ಭೂ ಒಡೆತನ ಯೋಜನೆಯಲ್ಲಿ ಭೂಮಿ ಖರೀದಿಸಲು ಘಟಕ ವೆಚ್ಚದ ಆರ್ಥಿಕ ಮಿತಿಯನ್ನು ರೂ.5.00 ಲಕ್ಷದಿಂದ ರೂ.10.00 ಲಕ್ಷಗಳವರೆಗೆ ಈ ಕೆಳಕಂಡ ಷರತ್ತುಗಳನ್ವಯ ಹೆಚ್ಚಿಸಿ ಆದೇಶಿಸಿದೆ.

1. ಈ ಯೋಜನೆಯು ಅಲೆಮಾರಿ/ಅರೆ ಅಲೆಮಾರಿ ಭೂರಹಿತ ಕೃಷಿ ಕಾರ್ಮಿಕರಿಗೆ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಅನ್ವಯಿಸುವುದು. ಕೃಷಿ ಜಮೀನು ಮಾತ್ರ ಖರೀದಿಸತಕ್ಕದ್ದು. ಇದರ ಫಲಾನುಭವಿಗಳು ಯಾವುದೇ ಕಾರಣಕ್ಕೆ ಈ ಜಮೀನನ್ನು ಪರಭಾರೆ ಅಥವಾ ಮಾರಾಟ ಮಾಡತಕ್ಕದ್ದಲ್ಲ.

..2

2. ಘಟಕ ವೆಚ್ಚದಲ್ಲಿ ಶೇ.50 ಸಾಲ ಮತ್ತು ಶೇ.50 ಸಹಾಯಧನ ಒದಗಿಸತಕ್ಕದ್ದು.
3. ಘಟಕ ವೆಚ್ಚ ರೂ.10.00 ಲಕ್ಷದೊಳಗೆ, ಎರಡು ಎಕರೆ ಖುಷ್ಕಿ ಅಥವಾ ಒಂದು ಎಕರೆ ತರಿ ಜಮೀನುಗಳನ್ನು ಅರ್ಧ ಎಕರೆಗೆ(20 ಗುಂಟೆಗೆ) ಕಡಿಮೆಯಾಗದಂತೆ ಖರೀದಿಸತಕ್ಕದ್ದು.
4. ಅಲೆಮಾರಿ/ಅರೆಅಲೆಮಾರಿ ಮಹಿಳೆಯರ ಹೆಸರಿಗೆ ಜಮೀನನ್ನು ನೊಂದಣಿ ಮಾಡಿಸತಕ್ಕದ್ದು.
5. ಈ ಯೋಜನೆಯಲ್ಲಿ ಮಂಜೂರು ಮಾಡಿದ ಅಲೆಮಾರಿ/ಅರೆ ಅಲೆಮಾರಿ ಜಮೀನನ್ನು ಬೇರೆ ಯಾರಾದರೂ ಖರೀದಿಸಿದಲ್ಲಿ ಅದು ಊರ್ಜಿತವಾಗತಕ್ಕದ್ದಲ್ಲ.

ಉಳಿದಂತೆ ಭೂ ಒಡೆತನ ಯೋಜನೆಯಲ್ಲಿ ಈ ಹಿಂದಿನ ಆದೇಶಗಳಲ್ಲಿ ತಿಳಿಸಿರುವ ಷರತ್ತುಗಳು ಮುಂದುವರಿಯತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 550 ವೆಚ್ಚ-3/2014, ದಿನಾಂಕ:28.07.2014ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ
(ಎನ್.ಆರ್. ಎರಕುಪ್ಪಿ)
ಸರ್ಕಾರದ ಅಧೀನ ಕಾರ್ಯದರ್ಶಿ–2(ಪ್ರ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

ಇವರಿಗೆ:-

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವೆಚ್ಚ–3, ವಿಧಾನಸೌಧ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಬೆಂಗಳೂರು
5. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
7. ಸರ್ಕಾರದ ಉಪ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರು.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.